"ಒಹ್, ಹಾಗಾದ್ರೆ ಟೆಸ್ಸಿ...!" ಸಮ್ಮರ್ಸ್ ಮೆಲ್ಲಗೆ ಹೇಳಿದ. ಟೆಸ್ಸಿ ತನ್ನ ಚೀಟಿಯನ್ನು ಬಿಗಿಯಾಗಿ ಮುಷ್ಟಿ ಬಿಗಿದು ಹಿಡಿದುಕೊಂಡಿದ್ದಳು. "ಅವಳ ಚೀಟಿಯನ್ನು ಎಲ್ಲರಿಗೂ ತೋರಿಸು ಬಿಲ್." ಎಂದ ಸಮ್ಮರ್ಸ್. ಅವಳು ಚೀಟಿಯನ್ನು ತೋರಿಸಲು ತಯಾರಿರಲಿಲ್ಲ. ಬಿಲ್ ಅವಳ ಮುಷ್ಟಿಯನ್ನು ಬಲವಂತದಿಂದ ಬಿಡಿಸಿ ಚೀಟಿಯನ್ನು ವಶಕ್ಕೆ ಪಡೆದು ಬಿಚ್ಚಿದ. ಚೀಟಿಯ ಮಧ್ಯದಲ್ಲಿ ಕಪ್ಪು ಚುಕ್ಕೆ ಎದ್ದು ಕಾಣಿಸುತ್ತಿತ್ತು. ಇದುವರೆಗೂ ಉಸಿರು ಬಿಗಿ ಹಿಡಿದಿದ್ದ ಜನಜಂಗುಳಿಯ ನಿಟ್ಟುಸಿರು ಸಶಬ್ದವಾಗಿ ಹೊರಟಿತು.

"ಸರಿ, ಗೆಳೆಯರೇ! ಈಗ ಆದಷ್ಟು ಬೇಗ ಉಳಿದ ಕೆಲಸವನ್ನು ಮುಗಿಸೋಣ." ಸಮ್ಮರ್ಸ್ ಹೇಳಿದ. ವರ್ಷಗಳು ಕಳೆದು ಹೋದಂತೆ ಊರಿನ ಜನ ಹಲವು ಮೂಲ ಸಂಪ್ರದಾಯಗಳನ್ನು, ಶಾಸ್ತ್ರಗಳನ್ನು ಮರೆತಿದ್ದರೂ ಕಲ್ಲುಗಳ ಬಗ್ಗೆ ಮರೆತಿರಲಿಲ್ಲ. ಹುಡುಗರು ಬೆಳಗಿನಿಂದಲೇ ವಿವಿಧ ಗಾತ್ರಗಳ ಕಲ್ಲುಗಳನ್ನು ರಾಶಿ ಒಟ್ಟಿದ್ದರು. ಅವುಗಳ ಮೇಲೆಲ್ಲಾ ಲಾಟರಿ ಎತ್ತಿದ್ದ ಚೀಟಿಗಳು ಗಾಳಿಗೆ ಹಾರಿ ಬಂದು ಅನಾಥವಾಗಿ ಬಿದ್ದುಕೊಂಡಿದ್ದವು. ಮಿಸೆಸ್ ಡೆಲಾಕ್ರೂಜ್ ಎರಡೂ ಕೈಗಳಲ್ಲಿ ಎತ್ತಿಕೊಳ್ಳುವಷ್ಟು ದೊಡ್ಡ ಕಲ್ಲೊಂದನ್ನು ಎತ್ತಿಕೊಂಡು, ಮಿಸೆಸ್ ಡೇನಿಯಲ್ಸಳಿಗೆ, "ನಡಿಯೇ ಬೇಗ, ಬೇಗ." ಎಂದಳು.

ಮಿಸೆಸ್ ಡೇನಿಯಲ್ಸ್ ಎರಡೂ ಕೈಗಳಲ್ಲಿ ಎರಡು ಸಣ್ಣ ಕಲ್ಲುಗಳನ್ನು ಹಿಡಿದುಕೊಂಡು ಏದುಸಿರು ಬಿಡುತ್ತಾ, "ನನಗೆ ನಿನ್ನಷ್ಟು ಬೇಗ ನಡೆಯೋಕ್ಕಾಗಲ್ಲ. ಮುಂದೆ ನಡಿ. ನಾನು ಬರುತ್ತೇನೆ." ಎಂದಳು.

ಮಕ್ಕಳೆಲ್ಲಾ ಕೈ ತುಂಬಾ, ಜೇಬುಗಳ ತುಂಬಾ ಕಲ್ಲುಗಳನ್ನು ತುಂಬಿಸಿಕೊಂಡಿದ್ದರು. ಯಾರೋ ಮಕ್ಕಳು ಪುಟ್ಟ ಡೇವಿಯ ಕೈಗೂ ಎರಡು ಗೋಲಿಗಾತ್ರದ ಕಲ್ಲುಗಳನ್ನು ಕೊಟ್ಟರು...

ಸುತ್ತ ನೆರೆದಿದ್ದ ಊರ ಜನರ ಮಧ್ಯದಲ್ಲಿ ಟೆಸ್ಸಿ, "ಇದು ಅನ್ಯಾಯ, ಅನ್ಯಾಯ!" ಎಂದು ಹುಚ್ಚಿಯಂತೆ ಬೊಬ್ಬಿಡುತ್ತಿದ್ದಳು. ಅವಳನ್ನು ಯಾರು ಕಿವಿಗೆ ಹಾಕಿಕೊಳ್ಳುವ ಮನಃಸ್ಥಿತಿಯಲ್ಲಿರಲಿಲ್ಲ. ಅವರು ಅವಳನ್ನು ಸುತ್ತುವರೆದು ಮುಂದೆ ಮುಂದೆ ಬರುತ್ತಲೇ ಇದ್ದರು.

"ಇದು ಅನ್ಯಾಯ, ಅನ್ಯಾಯ..." ಅವಳು ಕೂಗುತ್ತಿದ್ದಂತೇ, ಯಾರೋ ಬೀಸಿದ ಒಂದು ಕಲ್ಲು ರಪ್ಪನೆ ಅವಳ ಹಣೆಗೆ ಬಡಿಯಿತು. ಟೆಸ್ಸಿ ಎರಡೂ ಕೈಗಳನ್ನು ಅಡ್ಡ ಹಿಡಿದು ತಲೆ ತಗ್ಗಿಸುತ್ತಾ ಕಲ್ಲುಗಳಿಂದ ಬಚಾವಾಗಲು ಪ್ರಯತ್ನಿಸಿದಳು. ವಾರ್ನರ್ ಅಜ್ಜ ಎಲ್ಲರನ್ನೂ ಹುರಿದುಂಬಿಸುತ್ತಿದ್ದ. "ಹೊಡೀರಿ... ಹೊಡೀರಿ..." ಕಲ್ಲುಗಳು ಒಂದರ ಹಿಂದೆ ಒಂದು ರಪರಪನೆ ಟೆಸ್ಸಿಯನ್ನು ಅಪ್ಪಳಿಸತೊಡಗಿದವು.

"ಅನ್ಯಾಯ.. ಅನ್ಯಾಯ!!" ಅವಳ ಆರ್ತನಾದ ಕ್ಷೀಣವಾಗುತ್ತಲೇ ಹೋಯಿತು.

**ಶಿರ್ಲೆ ಜಾಕ್ಸನ್** (1916 – 1945)

ಭೀಭತ್ಸ ಮತ್ತು ರಹಸ್ಯಮಯ ಕತೆಗಳ ಸೃಷ್ಟಿಯಲ್ಲಿ ಅಮೆರಿಕದ ಲೇಖಕಿ ಶಿರ್ಲೆ ಜಾಕ್ಸನ್ ಈಗಲೂ ಜನಮನ್ನಣೆ ಗಳಿಸಿರುವ ಹೆಸರು. ಎರಡು ದಶಕಗಳ ಬರವಣಿಗೆ ವ್ಯವಸಾಯದಲ್ಲಿ ಆರು ಕಾದಂಬರಿ, ಎರಡು ಆತ್ಮಚರಿತ್ರೆ ಮತ್ತು 200ಕ್ಕೂ ಹೆಚ್ಚು ಕತೆಗಳನ್ನು ರಚಿಸಿದ್ದಾರೆ.

**ಜೆ.ವಿ. ಕಾರ್ಲೊ**

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಸಣ್ಣಕತೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುತ್ತ ಬಂದಿದ್ದಾರೆ. ಸಣ್ಣಕತೆಗಳು ಪತ್ರಿಕೆ, ಅಂತರ್ಜಾಲಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 80ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.